# ‘ಸ್ನೇಹಿತರಷ್ಟೇ!’



ಮಲೈಕಾ ಅರೋರಾ ಪತಿ ಅರ್ಬಾಜ್‌ನಿಂದ ದೂರವಾಗಿ ಏಳೆಂಟು ತಿಂಗಳೇ ಕಳೆದಿದೆ. ಆದರೆ, ಅವರ ವಿಚ್ಛೇದನಕ್ಕೆ ಇನ್ನೂ ಅಧಿಕೃತವಾಗಿ ಕಾನೂನಿನ ಮೊಹರೆ ಬಿದ್ದಿಲ್ಲ. ಅದರ ನಡುವೆಯೇ ಮಲೈಕಾ, ಅರ್ಜುನ್ ಕಪೂರ್‌ನ ಜತೆಗೆ ಓಡಾಡುತ್ತಿರುವ ಸುದ್ದಿ ಬಂದಿದೆ. ಈ ಸುದ್ದಿ ನಿಜವಾದಲ್ಲಿ ಬಾಲಿವುಡ್‌ನ ಅತಿ ಹಿರಿ–ಕಿರಿಯ ಜೋಡಿಗಳಲ್ಲಿ ಇದು ಒಂದಾಗಲಿದೆ. ಅರ್ಜುನ್, ಮಲೈಕಾಗಿಂತ ಬರೋಬ್ಬರಿ 12 ವರ್ಷ ಕಿರಿಯ. ಮಲೈಕಾ ಮತ್ತು ಅರ್ಜುನ್ ನಡುವೆ ಪ್ರೇಮ ಸಲ್ಲಾಪವಿದೆ ಎಂಬ ಮಾತು ದಟ್ಟವಾಗಿದ್ದರೂ, ಸಲ್ಮಾನ್ ಖಾನ್‌ನ ಅಣ್ಣ ಮತ್ತು ಅತ್ತಿಗೆಯ ದಾಂಪತ್ಯ ಅಂತ್ಯ ಕಾಣಲು ಅದು ಕಾರಣ ಅಲ್ಲವಂತೆ. ‘ಪರಸ್ಪರ ಹೊಂದಾಣಿಕೆ ಮೂಡದ ಕಾರಣ ಇಬ್ಬರೂ ದೂರಾಗುತ್ತಿದ್ದೇವೆ. ಮತ್ತೊಬ್ಬರ ಕಾರಣದಿಂದಲ್ಲ’ ಎಂದು ಅರ್ಬಾಜ್ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದ. ಪರಸ್ಪರ ಒಪ್ಪಿಕೊಂಡು ದೂರವಾಗುತ್ತಿರುವುದಾಗಿ ಇಬ್ಬರೂ ಹೇಳಿಕೆ ನೀಡಿದ್ದರು.



ತನ್ನ ಹಾಗೂ ಅರ್ಜುನ್ ನಡುವಣ ಪ್ರೇಮದಾಟದ ಕಥೆಯನ್ನು ಮಲೈಕಾ ಅಲ್ಲಗಳೆದಿದ್ದಾಳೆ. ತಾವಿಬ್ಬರೂ ಒಳ್ಳೆಯ ಸ್ನೇಹಿತರಷ್ಟೇ ಎಂದಿದ್ದಾಳೆ. ಅರ್ಬಾಜ್ ಕೂಡ ಈ ವದಂತಿ ಬಗ್ಗೆ ಕಿಡಿಕಾರಿದ್ದಾನೆ. ಅಂದ ಹಾಗೆ, ಅರ್ಜುನ್ ಕಪೂರ್ ಮತ್ತು ಸಲ್ಲು ಮಿಯಾನ ಕುಟುಂಬದ ನಂಟಿನಲ್ಲಿಯೂ ಸ್ವಾರಸ್ಯಕರ ಕಥೆಗಳಿವೆ. ‘ಇಷ್ಕ್‌ಜಾದೇ’ ಚಿತ್ರದ ಮೂಲಕ ಸಿನಿಮಾರಂಗಕ್ಕೆ ಕಾಲಿಟ್ಟ ಅರ್ಜುನ್‌ಗೆ ಸಿನಿಮಾ ತರಬೇತಿ ನೀಡಿದ್ದು ಸಲ್ಲು. 18 ವರ್ಷದವನಾಗಿದ್ದ ಅರ್ಜುನ್ ಆಗಲೇ ಸಲ್ಲು ತಂಗಿ ಅರ್ಪಿತಾ ಜತೆ ಡೇಟಿಂಗ್ ನಡೆಸಿದ್ದ. ಆದರೆ ತನ್ನ ಮತ್ತು ಮಲೈಕಾ ಕುರಿತ ಸುದ್ದಿ ಬಗ್ಗೆ ಅರ್ಜುನ್ ತುಟಿ ಬಿಚ್ಚುತ್ತಿಲ್ಲ. ವಿಚ್ಛೇದನ ದೊರೆತ ಬಳಿಕವೇ ಸತ್ಯ ಗೊತ್ತಾಗುವುದು ಎನ್ನುತ್ತಿದೆ ಬಿಟೌನ್.



# ಅಪ್ಪಟ ರಾಜಕೀಯ ಸಿನಿಮಾ ಅಸಾಧ್ಯ

ರಾಜಕೀಯ, ಅಪರಾಧ ಮತ್ತು ಸಾಮಾಜಿಕ ಘಟನಾವಳಿಗಳ ಆಧಾರದಲ್ಲಿ ಸಿನಿಮಾಗಳನ್ನು ಸೃಷ್ಟಿಸುವ ಪ್ರಮುಖರಲ್ಲಿ ಪ್ರಕಾಶ್ ಝಾ ಮುಂಚೂಣಿಯಲ್ಲಿರುವ ನಿರ್ದೇಶಕ. ಅವರ ‘ಜೈ ಗಂಗಾಜಲ್’, ‘ಅಪಹರಣ್’, ‘ಸತ್ಯಾಗ್ರಹ’, ‘ಆರಕ್ಷಣ್’ ಮತ್ತು ‘ರಾಜ್‌ನೀತಿ’ ರಾಜಕೀಯ ವಸ್ತುಗಳಿಂದಲೇ ಹುಟ್ಟಿರುವ ಸಿನಿಮಾಗಳು. ಹಾಗೆ ನೋಡಿದರೆ, ಇತ್ತೀಚಿನ ದಿನಗಳಲ್ಲಿ ರಾಜಕೀಯ ಸಿನಿಮಾಗಳನ್ನು ಸೃಷ್ಟಿಸುವ ನಿರ್ದೇಶಕರ ಸಂಖ್ಯೆ ಅತಿ ವಿರಳ. ಕೆಲವು ಸಿನಿಮಾಗಳಲ್ಲಿ ರಾಜಕೀಯದ ಸ್ಪರ್ಶವಿದ್ದರೂ ಅವು ರಾಜಕೀಯದ ಆಳ ಹರಿವನ್ನು ಸೂಕ್ಷ್ಮವಾಗಿ ಕಟ್ಟಿಕೊಟ್ಟಿಲ್ಲ. ಬಹುತೇಕ ಚಿತ್ರಗಳು ಈ ಅಂಶವನ್ನೂ ವ್ಯಾಪಾರಿ ದೃಷ್ಟಿಕೋನದಿಂದಲೇ ಪರಿಗಣಿಸುತ್ತವೆ. ಭಾರತದಂತಹ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಅಂಕುಶ ಹೇರುವ ದೇಶದಲ್ಲಿ ಅಪ್ಪಟ ರಾಜಕೀಯ ಸಿನಿಮಾ ಮಾಡುವುದು ಸಾಧ್ಯವೇ ಇಲ್ಲ ಎನ್ನುವುದು ಪ್ರಕಾಶ್ ಝಾ ಅಭಿಪ್ರಾಯ.

ಪರಿಶುದ್ಧ ರಾಜಕೀಯ ಸಿನಿಮಾ ಎಂದರೆ, ಅದು ವಿಡಂಬನೆ, ಟೀಕೆ, ವಿಮರ್ಶೆ, ವಿಶ್ಲೇಷಣೆಗಳನ್ನು ಒಳಗೊಂಡಿರಬೇಕು. ಮುಖ್ಯವಾಗಿ ಅವುಗಳನ್ನು ಹೇಳಲು ಸ್ವಾತಂತ್ರ್ಯ ಇರಬೇಕು. ಆದರೆ ನಮ್ಮ ದೇಶದಲ್ಲಿ ಅಂತಹ ಅವಕಾಶವಿಲ್ಲ ಎನ್ನುತ್ತಾರೆ ಅವರು. ಭಾರತದಲ್ಲಿನ ಈ ವಾತಾವರಣ ಬದಲಾಗುತ್ತದೆ ಎಂಬ ಭರವಸೆಯೂ ಅವರಲ್ಲಿಲ್ಲ. ಏಕೆಂದರೆ ಈ ರಾಜಕೀಯ ಪರಿಸ್ಥಿತಿಗೆ ಸುದೀರ್ಘ ಇತಿಹಾಸವಿದೆ. ಪುರಾಣವೂ ಇದೆ. ಸರ್ಕಾರ ಅಥವಾ ದೇಶಕ್ಕಿಂತಲೂ ಭಾರತದಲ್ಲಿನ ಸಮಾಜ ಹೆಚ್ಚು ಶಕ್ತಿಶಾಲಿ ಮತ್ತು ಹೆಚ್ಚು ಮಾತನಾಡುತ್ತದೆ. ಈ ಸಂಗತಿ ಹೊಸತೇನಲ್ಲ ಎಂಬ ವಿಶ್ಲೇಷಣೆ ಅವರದು.

‘ಈಗಿನ ರಾಜಕೀಯ ವ್ಯವಸ್ಥೆಯಲ್ಲಿ ಯಾರನ್ನೂ ಪ್ರಶ್ನಿಸುವಂತಿಲ್ಲ. ಒಂದು ಚಿಕ್ಕ ಅಂಶ ನಿರ್ದಿಷ್ಟ ಸಮುದಾಯಕ್ಕೆ ಸಂಬಂಧಿಸಿದೆ ಎಂದಾದರೆ ಸಾಕು ದಾಳಿಗಳೇ ನಡೆಯುತ್ತವೆ. ಇದನ್ನು ಪ್ರತಿ ಬಾರಿಯೂ ಎದುರಿಸುತ್ತಾ ಬಂದಿದ್ದೇನೆ. ನನ್ನ ಸಿನಿಮಾ ಬಿಡುಗಡೆಯಾಗುವ ಮುನ್ನವೇ ಈ ಸಮಾಜಗಳು, ರಾಜಕೀಯ ಪಕ್ಷಗಳು ಮತ್ತು ಕೆಲವು ಜನರು ನನ್ನನ್ನು ನಿಂದಿಸಲು ಪ್ರಾರಂಭಿಸುತ್ತಾರೆ. ಈ ದೇಶದಲ್ಲಿ ಸಿನಿಮಾ, ಸಾಹಿತ್ಯ, ಸಂಸ್ಕೃತಿ ಯಾವುದೇ ಆಗಲಿ, ಎಲ್ಲಿಯೂ ಅಭಿವ್ಯಕ್ತಿ ಸ್ವಾತಂತ್ರ್ಯ ಇಲ್ಲವೇ ಇಲ್ಲ’ ಎಂದಿದ್ದಾರೆ ಝಾ.

■ ಅಮಿ